**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಎಂವಿಸಿ ಸಂಖ್ಯೆ: 118/2019**

RW-3

ದಿನಾಂಕ **19.08.2022** ರಂದು ಈ ಸಾಕ್ಷಿದಾರರು ಹಾಜರಾಗಿ ತಮ್ಮ ಮುಖ್ಯವಿಚಾರಣೆಗೆ ಬದಲಾಗಿ ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಹಾಕುವುದಾಗಿ ನುಡಿದಿದ್ದಾರೆ. ನಂತರ ಈ ಸಾಕ್ಷಿದಾರರನ್ನು ಸಾಕ್ಷಿ ಕಟಕಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ನಂತರ ಸಾಕ್ಷಿದಾರರು ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ ಮತ್ತು ಈ ಕೆಳಕಂಡಂತೆ ನುಡಿದಿದ್ದಾರೆ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಮ್ಮ ವಕೀಲರ ಮೂಲಕ ನಾನೇ ಬರೆಸಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿಯನ್ನು ಹಾಕಿದ್ದೇನೆ.

ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯವಿಚಾರಣೆ ಮಾಡಲು ಮಾನ್ಯ ವಕೀಲರು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ.

**ಮುಂದುವರೆದ ಮುಖ್ಯವಿಚಾರಣೆ 2ನೇ ಎದುರುದಾರರ ಪರವಾಗಿ ಶ್ರೀ ಕೆ.ಡಿ.ಡಿ, ವಕೀಲರಿಂದ:**

1. Authorization letter ಅನ್ನು **ನಿಆರ್-8** ಎಂದು ಗುರುತಿಸಿದೆ. GoDigit ವಿಮಾ ಕಂಪನಿಯ ಅಧಿಕಾರಿಯಾದ ಅನುಶ್ರೀ ರವರು ಈ ಪ್ರಕರಣದ ತನಿಖೆಯನ್ನು Stellar Insurance Management Service ರವರಿಗೆ ವಹಿಸಿಕೊಟ್ಟಿರುವ ಬಗ್ಗೆ ಇರುವ ದಾಖಲೆಯನ್ನು **ನಿಆರ್-9** ಎಂದು ಗುರುತಿಸಿದೆ. ಅದೇ ರೀತಿ compact disc ಅನ್ನು **ನಿಆರ್-10** ಎಂಬುದಾಗಿ ಮತ್ತು ಇದಕ್ಕೆ ಸಂಬಂಧಿಸಿದ ಹಾಗೆ ಇರುವ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಅಡಿಯಲ್ಲಿ ನೀಡಿರುವ ದೃಢೀಕರಣಪತ್ರವನ್ನು **ನಿಆರ್-11** ಎಂದು ಗುರುತಿಸಿದೆ.

**ಈ ಹಂತದಲ್ಲಿ ಮತ್ತೆ ಒಂದು ದಾಖಲೆಯನ್ನು ಹಾಜರು ಮಾಡಲು ಮಾನ್ಯ ವಕೀಲರು ಸಮಯ ಕೇಳಿದ್ದಾರೆ, ಸಮಯ ನೀಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ